

# ಅಪರಾಧಿಯ ಕಟ್ಟೆಯಲ್ಲಿ

ಸ್ವಾಮಿ ಅಶೋಕಾನಂದ

ಸ್ವಾಮಿ ಅಶೋಕಾನಂದರು ರಾಮಕೃಷ್ಣ ಸಂಘದ ಆಂಗ್ಲ ಮಾಸಪತ್ರಿಕೆ 'ಪ್ರಬುದ್ಧ ಭಾರತ' ದ ಸಂಪಾದಕರಾಗಿದ್ದರು. (೧೯೨೬ ರಿಂದ ೧೯೩೦ ರವರೆಗೆ). ಅನಂತರ ೧೯೩೨ರಿಂದ ೧೯೬೯ ರವರೆಗೆ, ಅವರ ಜೀವನಾವಧಿಯವರೆಗೆ ಅಮೆರಿಕದ ಸಾನ್‌ಫ್ರಾನ್ಸಿಸ್ಕೋ ವೇದಾಂತ ಸಂಘದ ಅಧ್ಯಕ್ಷರಾಗಿದ್ದರು. ಸ್ವಾಮಿ ಅಶೋಕಾನಂದರು ಪ್ರಭಾವಶಾಲಿಯಾದ ಬರಹಗಾರರಾಗಿದ್ದರು. ಅವರು 'ಪ್ರಬುದ್ಧ ಭಾರತ'ದಲ್ಲಿ ಬರೆದ ಸಂಪಾದಕೀಯ ಮತ್ತು ಇತರ ಲೇಖನಗಳು ಅವರ ಪ್ರೌಢಿಮೆ, ಪ್ರಬುದ್ಧ ದೃಷ್ಟಿಕೋನ ಮತ್ತು ಶ್ರೇಷ್ಠ ಲೇಖನ ಶೈಲಿಗಳಿಗೆ ನಿದರ್ಶನವಾಗಿವೆ. ಪ್ರಸ್ತುತ ಲೇಖನ, 'ಪ್ರಬುದ್ಧ ಭಾರತ' ದಲ್ಲಿ ೧೯೩೧ ರಲ್ಲಿ ಪ್ರಕಟವಾದ ಅವರ ಆಂಗ್ಲ ಲೇಖನದ ಅನುವಾದ. ಅನುವಾದಕರಾದ ಡಾ|| ಇ. ವಸಂತಕುಮಾರ ಶ್ರೀರಾಮಕೃಷ್ಣ ಆಶ್ರಮದ ನಿಕಟ ಭಕ್ತರು.


**ಮನುಜ** ಗರ್ಭದಿಂದ ಜನಿಸಿದ ಯಾವ ವ್ಯಕ್ತಿಯೂ ಶ್ರೀಕೃಷ್ಣನಷ್ಟು ಟೀಕೆ ಮತ್ತು ಜತೆಜತೆಗೆ ಗೌರವಕ್ಕೆ ಒಳಗಾಗಿಲ್ಲ. ಒಂದು ಕಡೆ ಆತನ ಮೇಲೆ ಕಳ್ಳತನ, ಚಮತ್ಕಾರ, ಅನೀತಿಯ ಅಪಾದನೆ ಮಾಡಲಾಗಿದೆ; ಇನ್ನೊಂದು ಕಡೆ ಅವನನ್ನು ದೈವತ್ವಕ್ಕೆ ಏರಿಸಲಾಗಿದೆ—ಆತನನ್ನು ಪೂರ್ಣಾವತಾರಿ ಎಂದು ನಂಬಿರುವರು, ಉಳಿದವರಂತೆ ಆತ ಅಂಶಾವತಾರಿಯಲ್ಲ. ಒಂದು ವಿಷಯ ಬಹಳ ವಿಚಿತ್ರವಾಗಿದೆ. ಶ್ರೀಕೃಷ್ಣನ ವಿರುದ್ಧ ಆಪಾದನೆಗಳ ಪಟ್ಟಿಯನ್ನು ತಯಾರಿಸಲು ಅತ್ಯಂತ ಶ್ರಮಪೂರಿತ ಸಂಶೋಧನೆ ನಡೆಯುತ್ತಿರುವಾಗ, ಆತನನ್ನು ಪೂಜಿಸಿ ಮತ್ತು ಅವನ ಮೇಲೆ ಧ್ಯಾನಿಸಿ ವ್ಯಕ್ತಿಗಳು ಸಂತರಾಗಿ ಪರಿವರ್ತಿತ ರಾಗುತ್ತಿರುವರು. ದಕ್ಷಿಣದಲ್ಲಿ ರಾಮಾನುಜ ಮತ್ತು ಮಧ್ವಾಚಾರ್ಯರು, ಉತ್ತರದಲ್ಲಿ ರಮಾನಂದ, ಕಬೀರ ಮತ್ತು ಮೀರಾಬಾಯಿ, ಪೂರ್ವದಲ್ಲಿ ಚೈತನ್ಯ, ಪಶ್ಚಿಮದಲ್ಲಿ ವಲ್ಲಭಾಚಾರ್ಯರು ಶ್ರೀಕೃಷ್ಣನ ನಿಷ್ಠಾವಂತ ಭಕ್ತರು. ಮತ್ತೆ ಅವರು ಸಾವಿರಾರು ಜನರಿಗೆ ಮಾಯೆಯ ಸಾಗರವನ್ನು ದಾಟಲು ಹಲಗೆಯಂತಿರುವರು. ಶ್ರೀಕೃಷ್ಣನ ಶೀಲ ಅಷ್ಟೊಂದು ದೋಷಪೂರಿತವಾಗಿದ್ದರೆ ಇದು ಹೇಗೆ ಸಾಧ್ಯವಾಗುವುದು? ಅಷ್ಟೊಂದು ಜನರು ಸಾವಿರಾರು ವರ್ಷಗಳ ಕಾಲ ಅವನನ್ನು ಕುರಿತು ಚಿಂತಿಸುವುದರ ಮೂಲಕ ತಮ್ಮ ಜೀವನವನ್ನು ತೀವ್ರವಾಗಿ ಪರಿವರ್ತಿಸಿಕೊಳ್ಳಲು ಹೇಗೆ ಸಾಧ್ಯವಾಯಿತು? "ಕೃಷ್ಣ ಸಂಪ್ರದಾಯ"ದ ಹೆಸರೆತ್ತಿದರೆ ಅದನ್ನು ಹೀಯಾಳಿಸುವ, ಕೇವಲ ಮೇಲುನೋಟದ ಅಲ್ಪ ದೃಷ್ಟಿಯುಳ್ಳ ಜನರನ್ನು ಇದೊಂದು ಸಂಗತಿಯೇ ಗಂಭೀರವಾಗಿ ಚಿಂತಿಸುವಂತೆ ಮಾಡುವುದು.

ಅನಾದಿ ಕಾಲದಿಂದ ಶ್ರೀಕೃಷ್ಣನ ವ್ಯಕ್ತಿತ್ವ ಭಾರತದ ಧಾರ್ಮಿಕ ಜೀವನದಲ್ಲಿ ಎಷ್ಟರಮಟ್ಟಿಗೆ ಹಾಸು ಹೊಕ್ಕಾಗಿದೆ ಎಂದರೆ ಶ್ರೀಕೃಷ್ಣನನ್ನು ಹೊರತಾದ ಹಿಂದೂಧರ್ಮದ ಚರಿತ್ರೆ ದೊಡ್ಡ ಶೂನ್ಯವಾಗುವುದು. ಪ್ರತಿಯೊಂದು ಭಾರತೀಯ ಗೃಹದಲ್ಲಿಯೂ ಶ್ರೀಕೃಷ್ಣನಿಗೆ ಒಂದಲ್ಲ ಒಂದು ರೂಪಿನಲ್ಲಿ ಸ್ಥಾನವಿದೆ. ಅವನ ಹಾಡುಗಳು ಮಧ್ಯಾಹ್ನದ ವೇಳೆ ನಮ್ಮ ಹಸಿರು ಹುಲ್ಲುಗಾವಲನ್ನು ಸ್ಪಂದಿಸುವಂತೆ ಮಾಡುತ್ತವೆ—ರಾತ್ರಿಯ ನಿಷ್ಪಂದ ನೀರವತೆಯಲ್ಲಿ ನದಿಗಳ ಕಲಕಲ ನಿನಾದದೊಡನೆ ಮಿಳಿತವಾದ ದೀರ್ಘ ಸುನಾದದಲ್ಲಿ ಅವನ ಲೀಲೆಯನ್ನು ಕೇಳಬಹುದು; ಭಾರತದಲ್ಲಿ ಶ್ರೀಕೃಷ್ಣನ "ನೂರು ಹೆಸರುಗಳು" ಅನೇಕ ಮನೆಗಳಲ್ಲಿ ದಿನವಿಡೀ ಅನುರಣಿತವಾಗುತ್ತವೆ; ಆ "ಗೋಪಾಲಕ" ಭಗವಂತನ ಗೌರವಾರ್ಥ ಅನೇಕ ಹಬ್ಬಗಳು ವರ್ಷವಿಡೀ ಭಾರತೀಯ ಗೃಹಗಳ ಮಾಧುರ್ಯವನ್ನು ಜೀವಂತಗೊಳಿಸುತ್ತವೆ. ಏನು, ಇಡೀ ಜನಾಂಗ ಒಬ್ಬ ಅನೈತಿಕ ವ್ಯಕ್ತಿಯನ್ನು ಕಾಲಾನುಕಾಲ ಪೂಜಿಸುತ್ತಿರಲು ಸಾಧ್ಯವೇ?

ಶ್ರೀಕೃಷ್ಣನ ಜೀವನ ನಿಗೂಢ ರಹಸ್ಯದಿಂದ ಆವೃತವಾಗಿದೆ ಮತ್ತು ಅವನನ್ನು ಕುರಿತ ವಾಸ್ತವಿಕಾಂಶಗಳು ದಂತಕಥೆಗಳಲ್ಲಿ, ಪುರಾಣಗಳಲ್ಲಿ ಮತ್ತು ಕವಿಕಲ್ಪಿತ ಕೃತಿಗಳಲ್ಲಿ ಹುದುಗಿವೆ. ಅವುಗಳಿಂದ ನಿಜವಾದ ಕೃಷ್ಣ ಏನಾಗಿದ್ದನೆಂದು ಕಂಡುಹಿಡಿಯುವುದು ಬಹಳ ಕಷ್ಟ. ನಮ್ಮ ಪುರಾತನ ಸಾಹಿತ್ಯದಲ್ಲಿ ಕೆಲವು ಉಪನಿಷತ್ತುಗಳೂ ಕೂಡ ಶ್ರೀಕೃಷ್ಣನ ಹೆಸರನ್ನು ಉಲ್ಲೇಖಿಸುತ್ತವೆ; ಬಹುತೇಕ ಪುರಾಣಗಳು ಅವನ ಜೀವನ ಚರಿತ್ರೆಯ ವಿವಿಧ ಮುಖಗಳನ್ನು

ವಿಶೇಷವಾಗಿ ವಿವರಿಸಿವೆ; ಮಹಾಭಾರತದಲ್ಲಿ ಅವನ ಕೆಲಸಕಾರ್ಯಗಳು ಹಾಸುಹೊಕ್ಕಾಗಿದ್ದರೆ, ಭಗವದ್ಗೀತೆ ಅವನ ಅದ್ಭುತ ವ್ಯಕ್ತಿತ್ವಕ್ಕೆ ಒಂದು ಅದ್ಭುತ ದ್ಯೋತಕವಾಗಿದೆ. ಅವನಿಗೆ ಮೀಸಲಾದ ಇತರ ಅನೇಕ ಪ್ರಾಚೀನ ಗ್ರಂಥಗಳಿವೆ; ಮತ್ತು ಇಂದಿನವರೆಗೆ ಶ್ರೀಕೃಷ್ಣನ ಜೀವನವನ್ನು ವಸ್ತುವಾಗಿ ಉಳ್ಳ ಸಾಹಿತ್ಯ ಅಪಾರವಾಗಿ ಬೆಳೆದಿದೆ, ಮತ್ತು ಅದು ಇನ್ನೂ ಬೆಳೆಯುತ್ತಿದೆ.

ಶ್ರೀಕೃಷ್ಣನ ಜೀವನವನ್ನು ವಿವರಿಸುವ ಪ್ರಾಚೀನ ಗ್ರಂಥಗಳಲ್ಲಿ ಎಷ್ಟೋಂದು ಭಿನ್ನತೆ ಇದೆಯೆಂದರೆ, ಕೆಲವರು ಹಲವು ಜನ ಕೃಷ್ಣರಿದ್ದು ಕಾಲಕ್ರಮದಲ್ಲಿ ಅವರನ್ನೆಲ್ಲ ಸೇರಿಸಿ ಒಬ್ಬ ಕೃಷ್ಣನಂತೆ ರೂಪಿಸಿರಬಾರದೇಕೆ ಎಂಬ ಸಂದೇಹವನ್ನು ವ್ಯಕ್ತಪಡಿಸಿರುವರು. ಇದು ಶ್ರೀಕೃಷ್ಣನ ಜೀವನವನ್ನು ಯಥಾವತ್ತಾಗಿ ರೂಪಿಸುವಲ್ಲಿ ಒಂದು ದೊಡ್ಡ ಅಡ್ಡಿಯಾಗಿ ನಿವಾರಿಸಲು ಅಸಾಧ್ಯವಾಗಿದೆ. ಶ್ರೀಕೃಷ್ಣನ ಜೀವನವನ್ನು ಪಾಂಡಿತ್ಯಪೂರ್ಣ ಚರ್ಚೆಗೆ ಒಳಪಡಿಸುವುದರಲ್ಲಿ ಸಂತೋಷಪಡುವವರಲ್ಲಿ ನಮ್ಮ ಒಂದೇ ಒಂದು ಕೋರಿಕೆ ಏನೆಂದರೆ, ಅವನ ವ್ಯಕ್ತಿತ್ವವನ್ನು ಯಾವುದೋ ಗ್ರಂಥಗಳಲ್ಲಿ ಬರೆದಿರುವ ಯಾವುದೋ ಕೆಲವು ಘಟನೆಗಳಿಂದ ಅಳೆಯದೆ ಆ ಮಹಾಪ್ರವಾದಿಯ ಶೀಲ ಹೇಗೆ ಪ್ರಪಂಚದ ಅತ್ಯಂತ ಪುರಾತನವಾದ ಮತ್ತು ಯಾವುದರ ಜೀವನಪ್ರವಾಹ ಇಂದಿಗೂ ಪ್ರಬಲವಾಗಿ ಹರಿಯುತ್ತಿರುವುದೊ ಅಂತಹ ಜನಾಂಗದ ಮನಸ್ಸಿಗೆ ಒಪ್ಪಿಗೆಯಾಗಿದೆ ಎಂಬುದನ್ನು ತಿಳಿಯಲು ಪ್ರಯತ್ನಿಸಿ. ಇಲ್ಲದಿದ್ದರೆ ಅವರ ಮಾತುಗಳು ವ್ಯರ್ಥವಾಗಿ ಅವರ ಶಕ್ತಿ ಒಂದು ಜನಾಂಗದ ಧಾರ್ಮಿಕ ಜೀವನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ಅದನ್ನು ಟೀಕಿಸುವುದರಲ್ಲಿ ಕಳೆದುಹೋಗುವುದು.




ಯಾವಾಗ ಮೀರಾಬಾಯಿಯು ಶ್ರೀಕೃಷ್ಣನ ಪ್ರೇಮೋನ್ಮಾದದಲ್ಲಿ ರಾಜನಾದ ತನ್ನ ಗಂಡನ ಬೆದರಿಕೆಯನ್ನು ಮೀರಿ ಮತ್ತು ರಾಣಿಯ ಜೀವನದ ಸುಖಗಳನ್ನು ತಿರಸ್ಕರಿಸಿ ಯಾವ ಮಾನವ ಸಹಾಯವೂ ಇಲ್ಲದೆ ದಿಕ್ಕಿಲ್ಲದವಳಂತೆ ಬೀದಿಗಿಳಿದಳೋ ಆಗ ಶ್ರೀಕೃಷ್ಣನ ಜೀವನವನ್ನು ಅಂದು ಪ್ರಚಲಿತವಾಗಿದ್ದ ಗ್ರಂಥಗಳಲ್ಲಿ ಇದ್ದ ವಿವಿಧ ಘಟನೆಗಳಿಂದ ಅಳೆಯಲಿಲ್ಲ. ಯಾವಾಗ ಚೈತನ್ಯನು ಕೇವಲ ಕೃಷ್ಣನಾಮದ ಉಚ್ಚಾರಣೆ ಮಾತ್ರದಿಂದ ಕೃಷ್ಣಭಾವದಿಂದ ಆವೃತನಾಗುತ್ತಿದ್ದನೊ—ನೀಲಮೇಘದ ನೋಟ, ನೀಲಸಾಗರ ಅಥವಾ ತನ್ನ ಪ್ರಿಯತಮನಿಗೆ ಸಂಬಂಧ ಪಟ್ಟ ಯಾವುದೇ ಸಣ್ಣ ವಸ್ತು ಅಥವಾ ಘಟನೆ ಅವನನ್ನು ಉನ್ಮಾದದಲ್ಲಿ ಮುಳುಗಿಸುತ್ತಿತ್ತೋ—ಆಗ ಅವನು ಶ್ರೀಕೃಷ್ಣನ ಯಾವುದೋ ಒಂದು ನಡವಳಿಕೆ ಸಮರ್ಪಕವೆ ಅಲ್ಲವೆ ಎಂದು ವಿಚಾರ ಮಾಡಿದನೆ? ಆ ಯೋಗಿಯ ಇಡೀ ವ್ಯಕ್ತಿತ್ವ ಅವರ ಮನಸ್ಸನ್ನು ಸೆರೆಹಿಡಿಯಿತು ಮತ್ತು ಅವರು ಅದರ ಪ್ರೇಮಕ್ಕೆ ತಮ್ಮನ್ನು ಅರ್ಪಿಸಿಕೊಂಡರು.

ಶ್ರೀಕೃಷ್ಣನೆಂಬ ವ್ಯಕ್ತಿ ಹುಟ್ಟಿರಲಿಲ್ಲವೆಂದು ಸ್ಪಷ್ಟವಾಗಿ ಸಾಧಿಸಲು ಇಂದು ಸಾಧ್ಯವಾದರೂ ಶ್ರೀಕೃಷ್ಣನು ಹಿಂದಿನಷ್ಟೇ ಗೌರವವನ್ನು ಹಿಂದೂಜನಾಂಗದಿಂದ ಪಡೆಯುವನು. ಜನರಿಗೆ ಅವನಲ್ಲಿರುವ ವಿಶ್ವಾಸಕ್ಕೆ ಚ್ಯುತಿಬಾರದು. ಏಕೆಂದರೆ, ಬೆಲೆ ಇರುವುದು ಶ್ರೀಕೃಷ್ಣನ ಜೀವನದ ಘಟನೆಗಳಿಗಲ್ಲ, ಶ್ರೀಕೃಷ್ಣತತ್ತ್ವಕ್ಕೆ. ಶ್ರೀಕೃಷ್ಣನ ಹೆಸರನ್ನು ಉಚ್ಚರಿಸಿ ದಾಗ ರಾಷ್ಟ್ರದ ಕಣ್ಣಿನ ಮುಂದೆ ಎಂತಹ ದೃಷ್ಟಿ ಮೂಡುವುದು ಎಂಬುದನ್ನು ನಾವು ನೋಡಬೇಕು. ಶ್ರೀಕೃಷ್ಣನೆಂದರೆ ಜನರ ಪಾಲಿಗೆ, ಯಾರಿಂದ ತಮ್ಮ ಪ್ರೀತಿ ತಪ್ಪದೆ ಪ್ರತಿಸ್ಪಂದಿಸಲ್ಪಡುವುದೊ ಅಂತಹ ಅವತಾರ ಪುರುಷ. ಶ್ರೀಕೃಷ್ಣನೆಂದರೆ ಅವರ ಅರ್ಥ ಪ್ರೀತಿಯ ಸಾಗರ. ಅದನ್ನು ಮುಟ್ಟುವುದೆಂದರೆ ಅದರ ಬಲವಾದ ಸೆಳೆತಕ್ಕೆ ಸಿಕ್ಕಿ, ಲೌಕಿಕ ಸುಖದುಃಖಗಳಾಚೆ, ಅವುಗಳನ್ನು ಮೀರಿದ ಆನಂದದಲ್ಲಿ ತಮ್ಮನ್ನು ಮರೆಯುವುದು. ಶ್ರೀಕೃಷ್ಣನ ಹೆಸರಿನಲ್ಲಿ ನಮ್ಮ ಜನಾಂಗದ ಮನೋಧರ್ಮಕ್ಕೆ ಒಂದು ಅದ್ಭುತ ಆಕರ್ಷಣೆ ಇರುವುದು. ಜನರ ಎಲ್ಲ ಬಗೆಯ ಭಾವನೆಗಳ ಮೇಲೆ ಅದೇ ರೀತಿ ಮತ್ತು ಅಷ್ಟರಮಟ್ಟಿಗೆ ಪ್ರಭಾವ ಬೀರಬಲ್ಲ ಮತ್ತೊಬ್ಬ ಯೋಗಿಯನ್ನು ನಾವು ಕಾಣೆವು.

ಮಾನವಪ್ರೇಮ ಭಗವತ್‌ಪ್ರೇಮವಾಗಿ ಮಾರ್ಪಡುವ ಮಾರ್ಗದಲ್ಲಿ ಐದು ರೂಪಗಳನ್ನು ತಾಳುವುದಾದರೆ, ಆ ಎಲ್ಲ ಐದು ಭಾವಗಳೂ ಶ್ರೀಕೃಷ್ಣನ ಉಪಾಸನೆಯಲ್ಲಿ ವಿವಿಧ ವ್ಯಕ್ತಿಗಳಿಂದ ಉಪಯೋಗಿಸಲ್ಪಡುವುವು. ಕೆಲವರು ಅವನನ್ನು ಭಕ್ತನಂತೆ ಪೂಜಿಸುವರು, ಕೆಲವರು ದೀನ ಸೇವಕನಂತೆ, ಕೆಲವರು ಅವನನ್ನು ಪ್ರಿಯ ಸಖನಂತೆ ಕಾಣುವರು, ಕೆಲವರು ತಮ್ಮ ಪ್ರೀತಿಯ ಭಾವಪರವಶತೆಯಿಂದ ಅವನನ್ನು ದೈವೀ ಶಿಶುವಿನಂತೆ ಭಾವಿಸುವರು. ಕೆಲವರಿರುವರು, ಅವರಿನ್ನೂ ಮುಂದೆ ಹೋಗಿ ಅವನನ್ನು ತಮ್ಮ ಪ್ರಿಯತಮನಂತೆ ಭಾವಿಸುವರು.

ಅದೇಕೆ ಹೀಗೆ? ಇದರ ಹಿಂದಿರುವ ಕಾರಣವೇನು? ಕಾರಣವೇನೆಂದರೆ, ಕೃಷ್ಣನ ಭಾವನೆ ನಮ್ಮ ಮನಸ್ಸಿನ ಮುಂದೆ ಒಂದು ಸಂಗತಿಯನ್ನು ಪ್ರಧಾನವಾಗಿ ತರುವುದು. ಅವನನ್ನು ಯಾವುದೇ ರೀತಿಯಲ್ಲಿ ಪ್ರೀತಿಸುವುದೆಂದರೆ ಅವನಿಂದ ಅದ್ಭುತವಾದ,

ಪರಮಾದ್ಭುತವಾದ ಪ್ರೀತಿಯ ಆಕರ್ಷಣೆಯನ್ನು ಅನುಭವಿಸುವುದು. ಆದರಲ್ಲಿ ನಾವು ಸುಲಭವಾಗಿ ನಮ್ಮನ್ನು ಅರ್ಪಿಸಿಕೊಂಡು ಬಿಡಬಹುದು. ಆ ದಿವ್ಯ ಆನಂದದಲ್ಲಿ ಲೀನವಾಗಲು ಕೃಷ್ಣಪ್ರೇಮ ಪ್ರವಾಹದ ಸೆಳೆತಕ್ಕೆ ನಾವು ಒಳಗಾಗಬಹುದು. ಪ್ರೀತಿಯ ಮಾರ್ಗ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಅತ್ಯಂತ ಸಹಜವಾದ ದಾರಿ ಎಂದು ಹೇಳುವರು. ಏಕೆಂದರೆ, ಪ್ರೀತಿ ಎನ್ನುವುದು ಪ್ರತಿ ಜೀವಿಯಲ್ಲಿಯೂ ಅಂತರ್ಗತವಾಗಿರುವುದಲ್ಲವೇ? ಯಾರಾದರೂ ಒಬ್ಬರಲ್ಲಿ ಪ್ರೀತಿಯನ್ನು ಇಟ್ಟಿರದ ದುರುಳ, ದುರಾಚಾರಿ, ಕೊಲೆಪಾತಕಿ ಇರುವನೆ? ಈ ಪ್ರೀತಿಯ ಬೀಜ ಬೆಳೆದು ವಿಕಾಸವಾಗಿ ಸರಿಯಾದ ದಾರಿಯಲ್ಲಿ ಹೋಗಿ ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಬಿಡಬೇಕಷ್ಟೆ. ಪ್ರೇಮಾವತಾರಿಯಾದ, ಪ್ರೇಮಸ್ವರೂಪನಾದ ಶ್ರೀಕೃಷ್ಣ ಇಡೀ ಜನಾಂಗವೊಂದನ್ನು ತನ್ನ ಹೆಸರಿನಿಂದ ಉನ್ಮತ್ತವಾಗುವಂತೆ ಮಾಡಿರುವುದಕ್ಕೆ ಕಾರಣ ಇದೇ.



**ಶ್ರೀಕೃಷ್ಣನನ್ನು ಹಲವು ರೂಪಗಳಲ್ಲಿ ಪೂಜಿಸುವರು. ಅವನು ಸ್ತ್ರೀಪುರುಷರಿಬ್ಬರಿಗೂ ಆಬಾಲವೃದ್ಧರಿಗೂ ಪ್ರಿಯ ಆದರ್ಶವಾಗಿರುವನು. ಅವನು ಪರಮಾದ್ಭುತ ಸಂನ್ಯಾಸಿಯೂ ಗೃಹಸ್ಥನೂ ಆಗಿದ್ದನು.**

**—ಸ್ವಾಮಿ ವಿವೇಕಾನಂದ**

ಶ್ರೀಕೃಷ್ಣನ ಜೀವನದಲ್ಲಿ, ಗೋಪಿಯರೊಂದಿಗೆ ಅವನಿಗಿದ್ದ ಸಂಬಂಧದಷ್ಟು ವಿವಾದಾತ್ಮಕವಾದ ವಿಷಯ ಮತ್ತೊಂದಿಲ್ಲ. ಗೋಪಿಯರೊಂದಿಗೆ ಅವನ ಸಂಬಂಧದ ಬಗ್ಗೆ ಅವನ ಮೇಲೆ ಆಪಾದನೆಗಳನ್ನು ಹೊರಿಸಲಾಗಿದೆ ಮತ್ತು ಶ್ರೀಕೃಷ್ಣನನ್ನು ಅಪರಾಧಿಯ ಕಟ್ಟೆಯಲ್ಲಿ ನಿಲ್ಲಿಸಲಾಗಿದೆ. ಆದರೆ, ಇನ್ನೊಂದು ಕಡೆ, ಅವನ ಪರವಾಗಿ ನಿಲ್ಲುವ ಮತ್ತು ಅವನ ನಡವಳಿಕೆಗೆ ಸಮರ್ಥನೆ ನೀಡುವ ಜನರಿಗೇನೂ ಕೊರತೆಯಿಲ್ಲ. ಕೆಲವರು, ವಿಶೇಷವಾಗಿ ಆಧುನಿಕರು, ಶ್ರೀಕೃಷ್ಣನ ವೃಂದಾವನದ ಜೀವನದ ಬಗ್ಗೆ ಯಾವುದಾದರೂ ವಿಷಯವನ್ನು ಹೇಳಿದರೆ ಸಾಕು, ಕೂಡಲೆ ತಿರಸ್ಕಾರವನ್ನು ವ್ಯಕ್ತಪಡಿಸುವರು. ಆದರೆ, ಶ್ರೀಕೃಷ್ಣನ ಪ್ರಿಯ ಭಕ್ತರಿಗೆ ಯಮುನಾನದಿಯ ತೀರದಲ್ಲಿ ನಡೆದ ಶ್ರೀಕೃಷ್ಣನ ಜೀವನದ ಅದೇ ಘಟನೆಗಳು ಅತ್ಯಂತ ಮಧುರವಾದವು. ವೃಂದಾವನದಲ್ಲಿ ನಡೆದ ಶ್ರೀಕೃಷ್ಣನ ಜೀವನದ ಘಟನೆಗಳನ್ನು ಕುರಿತ ವಿವರಣೆಗಳಲ್ಲಿ ಭೇದವಿದೆ, ಮತ್ತು ಶ್ರೀಕೃಷ್ಣನ ಜೀವನವನ್ನು ವಿವರಿಸುವ ಗ್ರಂಥಗಳು ಯಾವಾಗಲೂ ಭಕ್ತರ ಹೃದಯದಿಂದ ಹೊರಹೊಮ್ಮಿದವು, ನಿಜವಾದ ಅರ್ಥದಲ್ಲಿ ಇತಿಹಾಸವಲ್ಲ. ಕವಿಕಲ್ಪನೆ ಮತ್ತು ಭಾವನೆಗಳು ನಮಗೆ ಹಿಂದಿನಿಂದ ಬಂದಿರುವ ಶ್ರೀಕೃಷ್ಣನ ಜೀವನವನ್ನು ವರ್ಣರಂಜಿತ ಮಾಡುವಲ್ಲಿ ಬಹಳ ಸಹಕಾರಿಯಾಗಿವೆ. ಆದ್ದರಿಂದ ಯಾವುಯಾವುದೋ ಪುಸ್ತಕಗಳಲ್ಲಿ ಅವನ ಬಗ್ಗೆ ಬರೆದಿರುವುದನ್ನು ಆಧರಿಸಿ ಆ ಯೋಗಿಯನ್ನು ಅಳೆಯುವುದು ಮತಿಹೀನವಾದುದು.

ಶ್ರೀಕೃಷ್ಣನ ಗೋಪಾಲಕ ಜೀವನದ ಸುತ್ತ ಇರುವ ವಿರೋಧಾಭಾಸದ ಗಲಾಟೆಯನ್ನು ಮೀರಿಹೋದ ನಂತರ ಗೋಪಿಕಾ ಪ್ರೇಮದ ಪ್ರಸಂಗ ಶ್ರೀಕೃಷ್ಣನ ಭಕ್ತ ಅನುಯಾಯಿಗಳ ಮನಸ್ಸಿಗೆ ಹೇಗೆ ಅನ್ನಿಸುವುದು? ಶ್ರೀಕೃಷ್ಣನ ಮೇಲಿನ ಗೋಪಿಯರ ಉತ್ಕಟ ಪ್ರೇಮದ ಭಾವನೆಯೇ ಅವರನ್ನು ಮಂತ್ರಮುಗ್ಧರನ್ನಾಗಿ ಮಾಡುವುದು. ನಾವು ಭಗವಂತನಿಗೆ ತೋರುವ ಪ್ರೇಮವು—ಜಿಪುಣನಿಗೆ ತನ್ನ ಹಣದ ಮೇಲಿರುವ ಆಕರ್ಷಣೆ, ತಾಯಿಗೆ ತನ್ನ ಮಗುವಿನ ಮೇಲಿರುವ ಪ್ರೀತಿ, ಮತ್ತು ಹೆಂಡತಿಗೆ ತನ್ನ ಗಂಡನ ಮೇಲಿರುವ ಪ್ರೇಮ—ಈ ಮೂರು ಬಗೆಯ ಉತ್ಕಟ ಪ್ರೇಮಗಳ ಸಂಯೋಗಕ್ಕೆ ಸಮನಾದರೆ ನಾವು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ಹೇಳುವರು.

ಆದರೆ ಗೋಪಿಯರ ಪ್ರೇಮದ ತೀವ್ರತೆ ಮೇಲೆ ಹೇಳಿದ ಭಗವಂತನ ಸಾಕ್ಷಾತ್ಕಾರಕ್ಕೆ ಇರಬೇಕಾದ ಆವಶ್ಯಕ ಪ್ರೇಮಕ್ಕಿಂತ ನೂರು ಪಟ್ಟು ಹೆಚ್ಚಾಗಿತ್ತು. ಆ ಉತ್ಕಟತೆ ಎಷ್ಟು ಬಲವಾಗಿತ್ತು ಎಂದರೆ ಅವರು ತಮ್ಮ ಸಂಸಾರ, ಸಮಾಜ, ಮಕ್ಕಳು, ಮಾನ (ಹೆಂಗಸಿನ ಅತ್ಯಮೂಲ್ಯ ಆಸ್ತಿ) ಇವನ್ನೆಲ್ಲ ಸಂಪೂರ್ಣವಾಗಿ ಮರೆತರು ಮತ್ತು ಬಲವಾದ ಪ್ರವಾಹಕ್ಕೆ ಸಿಕ್ಕಿ ಕೊಚ್ಚಿಕೊಂಡು ಹೋದವರಂತೆ ಶ್ರೀಕೃಷ್ಣನಿಂದ ಆಕರ್ಷಿತರಾದರು. ದೇವರು ಅತ್ಯಂತ ಅಸೂಯಾಪರನೆಂದು ಹೇಳುವರು; ತನ್ನ ಭಕ್ತರ ಪ್ರೀತಿ ಭಾಗವಾಗುವುದನ್ನು ಇಷ್ಟಪಡುವುದಿಲ್ಲ—ಅವರು ತಮ್ಮನ್ನು ತಾವು ಸಂಪೂರ್ಣವಾಗಿ ಭಗವಂತನಿಗೆ ಅರ್ಪಿಸಿಕೊಳ್ಳಬೇಕು, ಇಲ್ಲವಾದರೆ ಅವರು ದೇವರನ್ನು ಪ್ರೀತಿಸಲೇಬೇಕಾಗಿಲ್ಲ. ಹೀಗಿರುವಾಗ ಗೋಪಿಯರು ಈ ಷರತ್ತನ್ನು ಅತ್ಯಂತ ಹೆಚ್ಚಾಗಿ ಪಾಲಿಸಿದರು. ಶ್ರೀಕೃಷ್ಣನಲ್ಲಿ ಅವರಿಗಿದ್ದ ಪ್ರೇಮವು, ಭಯ, ನಾಚಿಕೆ, ದ್ವೇಷ—ಎಲ್ಲಾ ಭಾವನೆಗಳನ್ನೂ ಕಬಳಿಸಿತು. ಪ್ರಹ್ಲಾದ ಭಗವಂತನಲ್ಲಿ ಹೀಗೆ ಪ್ರಾರ್ಥಿಸಿದನು : "ಪ್ರಾಪಂಚಿಕರಿಗೆ ವಿಷಯ ವಸ್ತುಗಳ ಮೇಲೆ ಇರುವ ಪ್ರೇಮ ನನಗೆ ನಿನ್ನ ಮೇಲಿರಲಿ." ಹೌದು, ಗೋಪಿಯರ ಪ್ರೇಮಕ್ಕೆ ಅಂತಹ ತೀವ್ರತೆ ಇತ್ತು ಮತ್ತು ಅದು ಸಹಸ್ರಪಾಲು ಹೆಚ್ಚಿತು, ಆದುದರಿಂದಲೇ ಗೋಪಿಯರ ಪ್ರೇಮ ಪ್ರಸಂಗಗಳು ಭಕ್ತರ ಮನಸ್ಸಿಗೆ ಅಷ್ಟು ಬಲವಾಗಿ ನಾಟುವುವು. ಅವರು ಈ ಘಟನೆಗಳ ವಿವರಗಳನ್ನು ತಿಳಿಯಲು ಹೋಗುವುದಿಲ್ಲ, ಭಗವಂತನ ಮೇಲೆ ತಮಗಿರುವ ಪ್ರೀತಿಯೊಂದಿಗೆ ಗೋಪಿಯರ ಉತ್ಕಟಾಕಾಂಕ್ಷೆಯನ್ನು ಪಡೆಯಲು ಇಚ್ಛಿಸುವರು. ಗೋಪಿಯರಿಗೆ

ಶ್ರೀಕೃಷ್ಣನ ಮೇಲೆ ಇದ್ದ ಪ್ರೇಮದೊಂದಿಗೆ ಹೋಲಿಸಿದಾಗ ತಮಗಿರುವ ಭಕ್ತಿ ಎಷ್ಟು ಅಲ್ಪ ಎಂದು ಗೊತ್ತಾಗಿ ವಿಷಾದದಿಂದ ಅಳುವರು, ಮತ್ತು ಪ್ರೀತಿ ಗೌರವಗಳೊಡನೆ ತಲೆಬಾಗುವರು.

ಆದರೆ ಭಕ್ತಿಯ ಸ್ಥಾನ ನಮ್ಮ ಸ್ವಭಾವದ ಮೃದುಭಾಗದಲ್ಲಿದೆ. ಎಲ್ಲಿಯವರೆಗೆ ಪ್ರೀತಿ ನಮ್ಮ ಇಡೀ ವ್ಯಕ್ತಿತ್ವವನ್ನು ಪರಿವರ್ತಿಸಿಲ್ಲವೊ ಅಲ್ಲಿಯವರೆಗೆ ನಮಗೆ ಅಡ್ಡಿ ಆತಂಕಗಳು ಅಪಾಯಗಳು ಅನೇಕ ಇರುವುವು. ಆದ್ದರಿಂದ ಯಾವಾಗ ಜನರು ಭಾವಪರವಶರಾಗುವರೊ ಆಗ ಎಷ್ಟು ವೇಗನೆ ಮೇಲೆ ಹೋಗುವರೊ ಅಷ್ಟೂ ವೇಗನೆ ಕೆಳಗೆ ಬೀಳುವರು. ನಮಗೆ ಸಾಕಾದಷ್ಟು ವಿವೇಕ, ನಮ್ಮನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯುವ ವಿಚಾರಶಕ್ತಿ ಮತ್ತು ಅತ್ಯಂತ ಸಂಯಮಶೀಲ ಮನಸ್ಸು —ಇವುಗಳು ಇಲ್ಲದಿದ್ದರೆ ನಾವು ಹೀನಾಯವಾಗಿ ಸೋಲುವೆವು. ಹಾಯಿಪಟವನ್ನು ಹರಡಿದಾಗ ದೋಣಿಗಳು ಮಿಂಚಿನ ವೇಗದಿಂದ ಹೋಗುವುವು. ಆದರೆ, ಯಾವುದಾದರೂ ದೋಷದಿಂದ ಹಾಯಿಪಟ ಹರಿದುಹೋದರೆ, ಅದೇ ದೋಣಿಗಳು ತೀವ್ರ ಅಪಾಯಕ್ಕೆ ತುತ್ತಾಗುವುವು. ಪ್ರೀತಿಯೇ ಯಾರಿಗೆ ದಾರಿ ತೋರುವುದೊ ಅವರು ಅದೃಷ್ಟ ಶಾಲಿಗಳು. ಆದರೆ ಇತರರಿಗೆ ವಿಚಾರವಿಲ್ಲದ ಪ್ರೀತಿ ಅಪಾಯಕಾರಿಯಾಗಿರುವುದು. ಜನರು ಭಾವೋದ್ರೇಕಕ್ಕೆ ಒಳಗಾದಾಗ ಅವರು ಸಾಮಾನ್ಯವಾಗಿ ಅನೇಕ ಬಗೆಯ ದೌರ್ಬಲ್ಯಗಳಿಗೆ ತುತ್ತಾಗುವರು.

ಇದರಿಂದಾಗಿ ಅನೇಕರು ಗೋಪಿಯರಿಗೆ ಭಗವಂತನ ಮೇಲಿದ್ದ ಉತ್ಕಟ ಪ್ರೇಮವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರಯತ್ನಿಸಿ, ಆದರೆ ಸರಿಯಾದ ಶಿಕ್ಷಣ ಅಥವಾ ಶಿಸ್ತು ಇಲ್ಲದೆ ಅಪಾಯದ ದಾರಿಗೆ ಹೋಗಿ ಜೀವನವನ್ನು ಹಾಳುಮಾಡಿಕೊಂಡಿರುವರು. ಈ ಗುಂಪಿನ ಜನರು ಶ್ರೀಕೃಷ್ಣನ ಗೋಪಾಲಕ ಜೀವನದ ಬಗ್ಗೆ ಅತಿಯಾದ ಹೀನ ಆಪಾದನೆಗಳನ್ನು ಮಾಡಿ ಅದನ್ನು ಅಶ್ಲೀಲವಾಗಿ ಮಾಡಿರುವರು. ಜನರು ಅತಿಯಾದ ಆಸೆಯಿಂದ ಹಠಾತ್ತನೆ ಮೇಲಿನ ಸ್ಥಿತಿಗೆ ಹೋಗಲು ಆಶಿಸಿ ಕೆಳಗೆ ಬೀಳುವಾಗ (ಅವರು ಬೀಳುವುದು ಖಂಡಿತ) ಅತಿ ಹೀನಾಯವಾಗಿ ಬೀಳುವರು.

ಶ್ರೀಕೃಷ್ಣನ ವ್ಯಕ್ತಿತ್ವ ಕೇವಲ ಅವನ ವೃಂದಾವನದ ಜೀವನದಿಂದ ಮಾತ್ರ ಕೂಡಿಲ್ಲ. ಇದಲ್ಲದೆ ಬೇಕಾದಷ್ಟಿದೆ. ಶ್ರೀಕೃಷ್ಣನ ಜೀವನದ ಭಾವುಕತೆಯ ಮುಖ ಮಾತ್ರ ಅವನ ಭಕ್ತರಲ್ಲಿ ಬಹುಭಾಗ ವ್ಯಕ್ತವಾಗಿರುವುದು ಸೋಜಿಗವಾಗಿದೆ. ಅವನು ಜ್ಞಾನ ಮತ್ತು ಕರ್ಮಗಳನ್ನು ಹೇಗೆ ಅನುಷ್ಠಾನದಲ್ಲಿ ತರಬೇಕೆಂಬುದನ್ನು ತನ್ನ ಜೀವನದಲ್ಲಿಯೇ ತೋರಿಸಲಿಲ್ಲವೇ? ಹಾಗಾದರೆ ಅವನ ಜೀವನದ ಒಂದು ಅಂಶ ಮಾತ್ರ ಏಕೆ ಕಾಲಾನುಕಾಲದಲ್ಲಿ ಪ್ರತಿಧ್ವನಿತವಾಯಿತು? ಭಾವೋದ್ವೇಗದ ಅಭಿವ್ಯಕ್ತಿಯಲ್ಲಿ —ಅದು ಒಳ್ಳೆಯದೊ ಕೆಟ್ಟದೊ — ನಮ್ಮ ಮನಸ್ಸಿಗಂತೂ ಒಂದು ರೀತಿಯ ಶಾಂತಿ ದೊರಕುತ್ತದೆ. ಆದರೆ ಅದೇ ಶಾಂತಿ ನಮಗೆ ಕರ್ಮದಿಂದಾಗಲಿ, ವಿಚಾರಪೂರ್ಣ ಧರ್ಮಜೀವನದಿಂದಾಗಲಿ ಸಿಕ್ಕುವುದಿಲ್ಲ. ಈ ಕಾರಣದಿಂದಾಗಿಯೇ ಶ್ರೀಕೃಷ್ಣನ ಬೃಂದಾವನಲೀಲೆಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಲಾಗಿದೆ ಎಂದೆನಿಸುತ್ತದೆ. ಜೀವನದಲ್ಲಿ ಕಷ್ಟ-ನಷ್ಟಗಳನ್ನು ಅನುಭವಿಸಿದ ಮನುಷ್ಯ ತನ್ನ ಭಾವೋದ್ವೇಗಗಳಿಗೆ ಒಳಗಾಗುವನು; ಅದರಂತೆಯೇ ಅನೇಕ ಏಳುಬೀಳುಗಳಿಗೊಳಗಾದ ದೇಶವೂ ತನ್ನ ಭಾವೋದ್ವೇಗಗಳನ್ನೇ ಹೆಚ್ಚು ಬೆಳಸಿಕೊಂಡು ತನ್ನನ್ನು ಮರೆಯುವುದು. ಆದರೆ ಭಾರತ ಭಾವುಕತೆಯನ್ನು ಶಕ್ತಿಯಾಗಿಯೂ, ಮತ್ತು ಅನುಭವವನ್ನು ಕ್ರಿಯೆಯಾಗಿಯೂ ಪರಿವರ್ತಿಸಲು ಹೆಚ್ಚಾಗಿ ಪ್ರಯತ್ನಿಸಬೇಕಾದ ಸಮಯ ಬಂದಿದೆ. ಶ್ರೀಕೃಷ್ಣನ ಜೀವನ ಅದಕ್ಕೆ ಒಂದು ಪರಿಹಾರವನ್ನು ನಮಗೆ ನೀಡುವುದಲ್ಲವೇ?

## ಶ್ರೀಕೃಷ್ಣನ ವ್ಯಕ್ತಿತ್ವ

ಉಪನಿಷತ್ತುಗಳಿಂದ ಎದ್ದ ಸತ್ಯ-ಸೌಂದರ್ಯಗಳ, ಸಜ್ಜನಿಕೆ-ಪ್ರೇಮಗಳ ನಾದತರಂಗಗಳು ಮುಂದಿನ ಯುಗದ ಮಹಾವ್ಯಕ್ತಿತ್ವವೆಂಬ ವಿದ್ಯುತ್ ಸಂಗ್ರಾಹಕವೊಂದರಲ್ಲಿ ಸಂಗ್ರಹವಾಯಿತು. ಆ ವ್ಯಕ್ತಿತ್ವವು ಸುಮಾರು ಕ್ರಿ.ಪೂ. ಸಾವಿರದ ನಾನ್ನೂರರ ತನ್ನ ಜೀವಿತಕಾಲದಲ್ಲಿ ಆಧ್ಯಾತ್ಮಿಕವಾಗಿಯೂ ರಾಜಕೀಯವಾಗಿಯೂ ಭಾರತವನ್ನು ಚಕಿತಗೊಳಿಸಿತು; ಅದರ ನಾದವು ಇಂದೂ ನಮ್ಮನ್ನು ಎಚ್ಚರಗೊಳಿಸುತ್ತಿದೆ. ಗೀತೆಯ ಕರ್ತೃವಾದ ಶ್ರೀಕೃಷ್ಣನು ಭಾರತದ ಚಿಂತನ ಮತ್ತು ಜೀವನಗಳ ಮೇಲೆ ಎಷ್ಟು ಅದ್ಭುತವಾದ ರೀತಿಯಲ್ಲಿ ಪ್ರಭಾವವನ್ನು ಬೀರಿದ್ದಾನೆಂದರೆ ಭಾರತದಲ್ಲಿಯಾಗಲೀ ಬೇರೆ ಕಡೆಯಲ್ಲಾಗಲೀ ಅದಕ್ಕೆ ಸಮಾನವಾದುದು ಮತ್ತೊಂದಿಲ್ಲ. ಆತನ ಪ್ರಭಾವ ಆಳವಾಗಿದೆ, ವಿಸ್ತಾರವಾಗಿದೆ. ಭಾರತದ ಪಿತ್ರಾರ್ಜಿತದಲ್ಲಿ ಕೃಷ್ಣಾಂಶವನ್ನು ಕಳೆದರೆ ಉಳಿಯುವುದು ಅತ್ಯಲ್ಪ. ಆತನು ನಮ್ಮ ಮತ, ಧರ್ಮ,ತತ್ತ್ವದೃಷ್ಟಿ, ಅಧ್ಯಾತ್ಮ ಯೋಗ,ಕಾವ್ಯ, ಚಿತ್ರ,ಶಿಲ್ಪ, ಸಂಗೀತ, ನರ್ತನ ಮತ್ತು ಸಂಸ್ಕೃತಿ, ನಾಗರೀಕತೆಗಳು—ಇವುಗಳಲ್ಲಿ ಮುಂದುವರಿದ ನಮ್ಮ ಜನಜೀವನದ ವೈವಿಧ್ಯಕ್ಕೆ ಸಂಬಂಧಿಸಿರುವುದರಲ್ಲೆಲ್ಲಾ ಪ್ರವೇಶಿಸಿದ್ದಾನೆ. ಎಲ್ಲ ರೀತಿಯ, ಎಲ್ಲ ಮಟ್ಟದ ಜನರೂ ಆತನ ವ್ಯಕ್ತಿತ್ವಕ್ಕೆ ಮಾರುಹೋಗಿದ್ದಾರೆ. ಆತನು ಭಾರತೀಯರ ಹೃದಯ ಬುದ್ಧಿಗಳನ್ನು ಆಕರ್ಷಿಸುವ ಸಾರ್ವಕಾಲಿಕ ಕಿಂದರಿಜೋಗಿಯಾಗಿ, ನಮ್ಮ ಹುಡುಗ-ಹುಡುಗಿಯರು, ಋಷಿ-ಮುನಿಗಳು, ಪಂಡಿತ-ಕಲಾವಿದರು, ರಾಜಕೀಯ ನಿಪುಣರು-ವ್ಯವಹಾರಚತುರರು—ಈ ಎಲ್ಲರನ್ನೂ ತನ್ನತ್ತ ಆಕರ್ಷಿಸಿದ್ದಾನೆ, ಈಗಲೂ ಆಕರ್ಷಿಸುತ್ತಿದ್ದಾನೆ.

—ಸ್ವಾಮಿ ರಂಗನಾಥಾನಂದಜಿ